# ಕರ್ನಾಟಕ ರಾಜ್ಯ ಪೋಲಿಸ್ ಒದಗಿಸುವ ಪಾಸ್ ವ್ಯವಸ್ಥೆಯನ್ನು ಕುರಿತಾದ ಪ್ರಶ್ನೆಗಳಿಗೆ ಉತ್ತರಗಳು

**ನಾನು ತರಕಾರಿ ತರಲು ಅಥವಾ ಔಷಧಿ ತರಲು ಹೊರಗೆ ಹೋಗಬೇಕಾದಾಗ ಪಾಸ್ ಪಡೆಯಬೇಕೆ?**

ಬೇಡ. ಆದರೆ ದಿನಸಿ ಸಾಮಗ್ರಿ, ಔಷಧಿಗಳು ಮತ್ತು ತರಕಾರಿಗಳನ್ನು ತರಲು ದಿನವೂ ಹೊರಗೆ ಹೋಗಬಾರದು. ಲಾಕ್ ಡೌನ್ ಜಾರಿಯಲ್ಲಿರುವುದರಿಂದ ದೈನಂದಿನ ಜೀವನವು ಎಂದಿನಂತಿರುವುದಿಲ್ಲ.

**ನನ್ನ ವಾಸಸ್ಥಳದಲ್ಲಿ ಸಿಗದಿರುವ ಸಾಮಾನನ್ನು ಕೊಳ್ಳಲು ಹೋಗಬೇಕಾದಾಗ ನಾನು ಪಾಸ್ ಹೊಂದಿರಬೇಕೆ? ಏಕೆಂದರೆ ಪೋಲಿಸರು ಎಲ್ಲ ಕಡೆಯೂ ಬ್ಯಾರಿಕೇಡ್ ಹಾಕಿದ್ದು, ಪಾಸ್ ಇಲ್ಲದೆ ಬೇರೆಡೆಗೆ ಹೋಗಲು ನನಗೆ ಅವಕಾಶ ನೀಡುತ್ತಿಲ್ಲ.**

ನಿಮ್ಮ ವಾಸಸ್ಥಳದಲ್ಲಿ ಸಿಗುವುದನ್ನೇ ಬಳಸಿ. ಇದು ಒಂದು ವೈದ್ಯಕೀಯ ತುರ್ತು ಪರಿಸ್ಥಿತಿಯಿಂದಾದ ಲಾಕ್‌ಡೌನ್ ಆಗಿದೆ. ಇರುವುದರಲ್ಲೇ ಹೊಂದಾಣಿಕೆ ಮಾಡಿಕೊಳ್ಳುವುದು ಅನಿವಾರ್ಯ.

**ನಾನು ಅಗತ್ಯ ವಸ್ತುಗಳ ವ್ಯಾಪಾರಿಯಾಗಿದ್ದೇನೆ. ನನ್ನ ಅಂಗಡಿಗೆ ಸಾಮಾನುಗಳನ್ನು ಖರೀದಿಸಲು ಇನ್ನೊಂದು ಜಾಗಕ್ಕೆ ಹೋಗಬೇಕಾದಾಗ ನನಗೆ ಪಾಸ್ ಅಗತ್ಯವಿದೆಯೇ?**

ಪಾಸ್‌ನ ಅಗತ್ಯವಿಲ್ಲ. ಅಗತ್ಯ ವಸ್ತುಗಳನ್ನು ಸಾಗಿಸಲು ಖಾಲಿ ಟ್ರಕ್‌ಗಳಿಗೆ ಎಲ್ಲೆಡೆಯೂ ಅನುಮತಿ ನೀಡಲಾಗಿದೆ.

**ಪಾಸ್ ಇಲ್ಲದೆ ನಾನು ನನ್ನ ಕೆಲಸದ ಸ್ಥಳಕ್ಕೆ ಪ್ರಯಾಣ ಮಾಡಬಹುದೆ?**

ಇಲ್ಲ. ನಿಮಗೆ ಪ್ರಯಾಣ ಮಾಡಲು ಅನುಮತಿ ಇಲ್ಲ.

**ನಾನು ಅಗತ್ಯ ವಸ್ತುಗಳ ಸರಬರಾಜುದಾರನಾಗಿದ್ದೇನೆ. ರಾಜ್ಯದ ಇನ್ನೊಂದು ಭಾಗದಿಂದ ಅಗತ್ಯ ವಸ್ತುಗಳನ್ನು ಪಡೆಯಲು ಖಾಲಿ ಸಾಗಾಣಿಕಾ ವಾಹನಗಳನ್ನು ಕಳಿಸಬಹುದೆ?**

ಕಳಿಸಬಹುದು. ನೀವು ನಿಮ್ಮ ಸಾಗಾಣಿಕಾ ವಾಹನವನ್ನು ಅಗತ್ಯ ವಸ್ತುಗಳನ್ನು ಸಾಗಾಣಿಕೆ ಮಾಡಲು ಇತರೆಡೆ ಕಳಿಸಬಹುದು.

**ನಾನು ಸ್ವ-ಉದ್ಯೋಗಿಯಾಗಿದ್ದಲ್ಲಿ, ಅಥವಾ ಹೊಸ ಉದ್ದಿಮೆದಾರನಾಗಿದ್ದಲ್ಲಿ ಆಗಾಗ ಕಚೇರಿಗೆ ಭೇಟಿ ನೀಡಬೇಕಾದಾಗ ಅಥವಾ ಅಗತ್ಯ ಉಪಕರಣವೊಂದನ್ನು ಪಡೆಯಬೇಕಾದಾಗ ಪಾಸ್ ಪಡೆಯಬೇಕೆ?**

ತುರ್ತುಪರಿಸ್ಥಿತಿಗಳಲ್ಲಿ, ಯಾವುದು ಅಗತ್ಯ ಎಂಬುದನ್ನು ಸರ್ಕಾರವು ನಿರ್ಧರಿಸುತ್ತದೆ, ವ್ಯಕ್ತಿಗಳಲ್ಲ. ದಯವಿಟ್ಟು ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸಿ.

**ನಾನು ವೈದ್ಯರ ಬಳಿ ಹೋಗಲು ಪಾಸ್ ಪಡೆಯಬೇಕಿದೆ. ಅರ್ಜಿ ಸಲ್ಲಿಸುವ ವಿಧಾನ ಹೇಗೆ?**

ಸಾಮಾನ್ಯವಾದ ವೈದ್ಯಕೀಯ ಸ್ಥಿತಿಗಳಿಗೆ ದೂರವಾಣಿ ಮೂಲಕ ಔಷಧಿಗಳು ಲಭ್ಯವಿವೆ. ತುರ್ತು ಸಂದರ್ಭಗಳಲ್ಲಿ ದಯವಿಟ್ಟು ಆ್ಯಂಬುಲೆನ್ಸ್ ಬಳಸಿ. ಅಥವಾ ಹೊಯ್ಸಳ ವಾಹನಗಳನ್ನೂ ಕೂಡ ಬಳಸಬಹುದು.



**ನಾನು ವಾಸಿಸುತ್ತಿರುವ ನಗರದ ಇನ್ನೊಂದು ಭಾಗದಲ್ಲಿ/ಬೇರೆ ಜಿಲ್ಲೆಯಲ್ಲಿ ವಾಸವಾಗಿರುವ ನನ್ನ ತಂದೆತಾಯಿಯರನ್ನು / ಒಡಹುಟ್ಟಿದವರನ್ನು / ಪತ್ನಿ / ಮಕ್ಕಳನ್ನು ಭೇಟಿಯಾಗಬೇಕಿದೆ**

ಇದು ವೈದ್ಯಕೀಯ ತುರ್ತುಪರಿಸ್ಥಿತಿ ಮತ್ತು ಲಾಕ್‌ಡೌನ್ ಆಗಿದೆ. ಬದುಕು ಎಂದಿನಂತಿಲ್ಲ. ತುರ್ತುನೆರವಿಗಾಗಿ ಸಹಾಯವಾಣಿಗೆ ಕರೆ ಮಾಡಿ.

**ನಾನು ಇನ್ನೊಂದು ಜಿಲ್ಲೆಯಲ್ಲಿರುವ ಬಂಧುವೊಬ್ಬರ ಅಂತಿಮಸಂಸ್ಕಾರಕ್ಕೆ ಹೋಗಬೇಕಿದೆ. ಅವರ ಸಾವು ಕೊರೊನಾ ಕಾರಣದಿಂದ ಸಂಭವಿಸಿಲ್ಲ. ನಾನು ಹೋಗಬಹುದೆ? ಹೌದಾದಲ್ಲಿ ಪಾಸ್ ಪಡೆಯುವ ವಿಧಾನ ಹೇಗೆ?**

ಸ್ಥಳೀಯ ಪೋಲಿಸ್ ಠಾಣೆಯಿಂದ ಅಂತಿಮಸಂಸ್ಕಾರಕ್ಕೆ ಅನುಮತಿ ಪಡೆಯಬಹುದು. ಸೂಕ್ತ ಪರಿಶೀಲನೆಯ ನಂತರ ಪ್ರಯಾಣಕ್ಕೆ ಅನುಮತಿ ನೀಡಲಾಗುವುದು.

**ನನ್ನ ಬಳಿ ಅಡುಗೆಗೆ ಸಹಾಯ ಮಾಡಬಲ್ಲವರು/ಆಡುಗೆ ಮಾಡುವ ಉಪಕರಣಗಳು ಇಲ್ಲದ ಕಾರಣ ನಾನು ಇನ್ನೊಂದು ಜಿಲ್ಲೆಯಲ್ಲಿರುವ ನನ್ನ ಪಾಲಕರ ಬಳಿ ಹೋಗಬಯಸುತ್ತೇನೆ. ನಾನು ಹೋಗಬಹುದೆ?**

ಸಾಧ್ಯವಿಲ್ಲ. ಮನೆಗೆ ಆಹಾರ ಒದಗಿಸುವ ಸೌಕರ್ಯವಿರುವುದರಿಂದ ನಿಮಗೆ ಇತರ ಜಿಲ್ಲೆಗಳಿಗೆ ಪ್ರಯಾಣ ಮಾಡಲು ಅನುಮತಿಯಿಲ್ಲ.

**ನಾನು ಖಾಸಗಿ ಕ್ಲಿನಿಕ್ ಹೊಂದಿರುವ ವೈದ್ಯ. ನಾನು ನನ್ನ ಕೆಲಸವನ್ನು ಮುಂದುವರಿಸಬಹುದೆ?**

ಲಾಕ್‌ಡೌನ್ ಇರುವುದರಿಂದ ಕ್ಲಿನಿಕ್ ತೆರೆಯುವಂತಿಲ್ಲ. ಜನರೂ ಕೂಡ ಸಾಮಾನ್ಯ ಚಿಕಿತ್ಸೆಗಳಿಗಾಗಿ ಮನೆಯಿಂದ ಹೊರಬರುವಂತಿಲ್ಲ. ನೀವು ತುರ್ತುಸಂದರ್ಭಗಳಲ್ಲಿ ಮನೆಯಿಂದಲೇ ಸಲಹೆ ನೀಡಬಹುದು.

**ಇತರರಿಂದ ಆರು ಅಡಿಗಳ ಅಂತರವನ್ನಿರಿಸಿಕೊಂಡು ನಾನು ಬೆಳಿಗ್ಗೆ ಜಾಗಿಂಗ್ ಮಾಡಬಹುದೆ?**

ಇಲ್ಲ. ಲಾಕ್‌ಡೌನ್ ಅವಧಿ ಮುಗಿಯುವವರೆಗೂ ನೀವು ಜಾಗಿಂಗ್ ಮಾಡುವಂತಿಲ್ಲ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ವೈದ್ಯಕೀಯ ಸಹಾಯವಾಣಿಗೆ ಕರೆ ಮಾಡಿ.

## ನಾವು ನಿಮಗೆ ನೆರವಾಗಲು ಸಹಕರಿಸಿ

## ಕರ್ನಾಟಕ 24/7 ಸಹಾಯವಾಣಿಗಳು

## 104, 08046848600, 08066692000

**ಇ ಪಾಸ್‌ಗೆ ಅರ್ಜಿ ಹೇಗೆ ಸಲ್ಲಿಸುವುದು?**

(ಬೆಂಗಳೂರಿಗೆ ನಿರ್ದಿಷ್ಟವಾಗಿದೆ)

ಇ ಪಾಸಿಗೆ ಅರ್ಜಿ ಸಲ್ಲಿಸುವ ವಿಧಾನ

ಲಿಂಕ್: kspclearpass.mygate.com

ಇ ಪಾಸ್ ಸಹಾಯಕೇಂದ್ರ:

080–22942200

080–22942325

080–22942330

**ಯಾವ ಉದ್ದೇಶಕ್ಕಾಗಿ ಇ ಪಾಸ್‌ಗಳು ಲಭ್ಯ?**

(ಬೆಂಗಳೂರಿಗೆ ನಿರ್ದಿಷ್ಟವಾಗಿದೆ)

ಸರ್ಕಾರದ ಮಾರ್ಗಸೂಚಿಯಲ್ಲಿ ವಿವರಿಸಲಾಗಿರುವ ಅಗತ್ಯ ಸೇವೆಗಳಿಗೆ ಇ ಪಾಸ್ ಲಭ್ಯ.

**ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರಿಗೂ ಪಾಸ್ ಅಗತ್ಯವೇ?**

ಅವರು ಕೆಲಸಕ್ಕೆ ಹೋಗುವಾಗ ಅವರ ಬಳಿ ಅವರ ಅಧಿಕೃತ ಗುರುತಿನ ಚೀಟಿ ಇದ್ದರೆ ಸಾಕು.

**ನನಗೆ ಠೇವಣಿ ಇಡುವುದಕ್ಕಾಗಿ ಬ್ಯಾಂಕಿಗೆ ಹೋಗಬೇಕಿದೆ.**

ಇದಕ್ಕಾಗಿ ಆನ್‌ಲೈನ್ ಸೇವೆ ಬಳಸಿ

**ತುರ್ತು ವೈದ್ಯಕೀಯ ಪರಿಸ್ಥಿತಿಗಳನ್ನು ಹೇಗೆ ನಿಭಾಯಿಸುವುದು?**

108 ಗೆ ಕರೆ ಮಾಡಿ ಆ್ಯಂಬುಲೆನ್ಸ್ ಸೇವೆ ಪಡೆಯಿರಿ.

**ಇ ಪಾಸ್ ಚಾಲ್ತಿಯಲ್ಲಿರುವ ಅವಧಿ ಎಷ್ಟು?**

(ಬೆಂಗಳೂರಿಗೆ ನಿರ್ದಿಷ್ಟವಾಗಿದೆ)

ಅದನ್ನು ಇ ಪಾಸಿನಲ್ಲೇ ನಮೂದಿಸಲಾಗಿರುತ್ತದೆ

**ಇ ಪಾಸಿನ ಸಾಫ್ಟ್ ಪ್ರತಿ ಸಾಕೇ ಅಥವಾ ಹಾರ್ಡ್ ಪ್ರತಿ ಇಟ್ಟುಕೊಳ್ಳಬೇಕೆ?**

(ಬೆಂಗಳೂರಿಗೆ ನಿರ್ದಿಷ್ಟವಾಗಿದೆ)

ಕೇವಲ ಸಾಫ್ಟ್ ಪ್ರತಿ ಸಾಕು.

**ನೀರಿನ ಫಿಲ್ಟರ್, ಆರ್‌ಒ ಪ್ಲಾಂಟ್, ಪ್ಲಂಬಿಂಗ್ ಮುಂತಾದವುಗಳ ರಿಪೇರಿ ಮಾಡಿಸುವ ಬಗೆ ಹೇಗೆ?**

ಆನ್‌ಲೈನ್ ಸೇವೆ ಸಲ್ಲಿಸುವ ಅಂಥ ಹಲವಾರು ಏಜೆನ್ಸಿಗಳಿಗೆ ಇ ಪಾಸ್ ನೀಡಲಾಗಿದೆ.

**ಸಾಕುಪ್ರಾಣಿಗಳಿಗೆ ಆಹಾರ ಪಡೆಯುವ ಬಗೆ ಹೇಗೆ?**

ಆನ್‌ಲೈನ್ ಮೂಲಕ ತರಿಸಿಕೊಳ್ಳಬಹುದು ಅಥವಾ ಹತ್ತಿರದ ದಿನಸಿ ಅಂಗಡಿಗಳಿಂದ ಖರೀದಿಸಬಹುದು

**ವಯಸ್ಸಾದ ಪಾಲಕರು ಬೇರೆಕಡೆ ಇದ್ದರೆ ಏನು ಮಾಡುವುದು?**

ಅಂಥ ಸಂದರ್ಭಗಳಲ್ಲಿ ಸ್ಥಳೀಯ ಆಡಳಿತವನ್ನು ಸಂಪರ್ಕಿಸಿ.

## ಆಹಾರ ಪೊಟ್ಟಣ ವಿತರಿಸಬೇಕೆಂದವರು ಯಾರನ್ನು ಸಂಪರ್ಕಿಸಬೇಕು?

**ಬೆಂಗಳೂರಿನ ಹೊರಗೆ ವಾಸಿಸುವವರು:** ನಿಮ್ಮ ಸ್ಥಳೀಯ ಆಡಳಿತವನ್ನು ಸಂಪರ್ಕಿಸಿ

**ಬೆಂಗಳೂರಿನ ನಿವಾಸಿಗಳು: ಬೆಂಗಳೂರು ಮಹಾನಗರ ಪಾಲಿಕೆಯ ಜಾಯಿಂಟ್ ಕಮಿಷನರ್ ಕಚೇರಿ ಅಥವಾ ಕೆಳಕಂಡ ಪೋಲಿಸ್ ಇಲಾಖೆಯ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸಿ**

| ಕ್ರಮ ಸಂಖ್ಯೆ | ಹೆಸರು | ಹುದ್ದೆ | ಕೆಲಸದ ಸ್ಥಳ | ಲ್ಯಾಂಡ್‌ಲೈನ್ | ಮೊಬೈಲ್ |
|---|---|---|---|---|---|
| 1 | ವೆಂಕಟಾಚಲಪತಿ | ಜಾ.ಕಮಿಶನರ್ | ಮಹದೇವಪುರ | 080–28511166 | 9513322144 |
| 2 | ಕೆ ಆರ್ ಪಲ್ಲವಿ | ಜಾ.ಕಮಿಶನರ್ | ಪೂರ್ವ | 080–22975801 | 9480685619 |
| 3 | ಎನ್ ಚಿದಾನಂದ | ಜಾ. ಕಮಿಶನರ್ | ಪಶ್ಚಿಮ | 080–22975648 | 9480685411 |
| 4 | ವೀರಭದ್ರಸ್ವಾಮಿ | ಜಾ.ಕಮಿಶನರ್ | ದಕ್ಷಿಣ | 080–22975701 | 901462568 |
| 5 | ರಾಮಕೃಷ್ಣ ಎಂ | ಜಾ.ಕಮಿಶನರ್ | ಬೊಮ್ಮನಹಳ್ಳಿ | 080–25732628 | 9480683433<br>9449484044 |
| 6 | ಡಾ. ಡಿ ಆರ್ ಅಶೋಕ್ | ಜಾ.ಕಮಿಶನರ್ | ಯಲಹಂಕ | 080–22975936 | 9480685228<br>9620673768 |
| 7 | ಹೆಚ್. ಬಾಲಶೇಖರ | ಜಾ.ಕಮಿಶನರ್ | ಆರ್‌ಆರ್ ನಗರ | 080–28604652 | 9845934551 |
| 8 | ಕೆ. ನರಸಿಂಹಮೂರ್ತಿ | ಜಾ.ಕಮಿಶನರ್ | ಟಿ. ದಾಸರಹಳ್ಳಿ | 080–22975901 | 9480685855 |

**ಸಾರ್ವಜನಿಕರು ದೇಣಿಗೆ ನೀಡಿದ ವಸ್ತುಗಳನ್ನು ಸ್ವೀಕರಿಸಿ ವಿತರಿಸುವ ಪೋಲಿಸ್‌ಇಲಾಖೆಯ ನೋಡಲ್ ಅಧಿಕಾರಿಗಳು**

| ಕ್ರಮ ಸಂಖ್ಯೆ | ವಿಭಾಗ | ನೋಡಲ್ ವಿಭಾಗ | ಅಧಿಕಾರಿಯ ಹೆಸರು (ಎಸಿಪಿ) | ಮೊಬೈಲ್ |
|---|---|---|---|---|
| 1 | ವೈಟ್‌ಫೀಲ್ಡ್ | ವೈಟ್‌ಫೀಲ್ಡ್ | ಮನೋಜ್ ಕುಮಾರ್ | 9480801076 |
| 2 | ಪೂರ್ವ | ಪುಲಿಕೇಶಿನಗರ | ತಬ್ರಕ್ ಫಾತಿಮಾ | 9480801206 |
| 3 | ದಕ್ಷಿಣ | ವಿವಿ ಪುರಂ | ವಲಿ ಬಾಶಾ | 9480801506 |
| 4 | ಕೇಂದ್ರ | ಶೇಷಾದ್ರಿಪುರಂ | ಬಶಿರ್ ಅಹಮದ್ | 9480801105 |
| 5 | ಆಗ್ನೇಯ | ಮಡಿವಾಳ | ಕರಿಬಸವನಗೌಡ | 9480801606 |
| 6 | ಈಶಾನ್ಯ | ದೇವನಹಳ್ಳಿ | ಸುಬ್ರಮಣ್ಯ ಪಿ ಟಿ | 9480801071 |
| 7 | ಉತ್ತರ | ಮಲ್ಲೇಶ್ವರಂ | ಧನಂಜಯ ವಿ | 9480801305 |
| 8 | ಪಶ್ಚಿಮ | ಚಿಕ್ಕಪೇಟೆ | ಮಹಂತ ರೆಡ್ಡಿ | 9480801705 |

# ನಾವು ನಿಮಗೆ ನೆರವಾಗಲು ಸಹಕರಿಸಿ

# ಕರ್ನಾಟಕ 24/7 ಸಹಾಯವಾಣಿಗಳು

# 104, 08046848600, 08066692000